ವಿ. ಹಮೀದ್, ವಿಟ್ಲ
*ಕೊಡೆ ಹಿಡಿದು ಮಳೆಯಲ್ಲೇ ನೆನೆಯುತ್ತಿರುವಾಕೆಗೆ ಏನೆನ್ನಲಿ?*



ಮುಂದಿನ ಮಳೆ ಬೀಳುವುದಕ್ಕೆ ಮುಂಚೆ ಕೊಡೆ ರಿಪೇರಿ ಮಾಡಿಸಿಕೊಳ್ಳಿ ಎನ್ನಿ.

ಶ್ವೇತಾಲಕ್ಷ್ಮಿ, ಅಮ್ಮೆ, ಬೆಂಗಳೂರು
*ಇತರರ ಲೆಕ್ಕದಲ್ಲಿ ಯಲ್ಲಮ್ಮನ ಜಾತ್ರೆ ಮಾಡುವವರನ್ನು ಏನೆಂದು ಕರೆಯುತ್ತಾರೆ?*
ತೆರಿಗೆ ಹಣವನ್ನು ಸಾಲ ನೀಡಿ ಮನ್ನಾ ಮಾಡಿ ಜನತೆಗೆ ಚೊಂಬುಭಾಗ್ಯ ನೀಡುವ ಭಾಗ್ಯದಾತರು.

ಟಿ. ದೊಡ್ಡಲಿಂಗೇಗೌಡ, ಕೊಳ್ಳೇಗಾಲ
*ರಾಜಕೀಯ ನಾಯಕನಾಗಲು ಏನು ಮಾಡಬೇಕು ಸಾರ್?*
ಮಾಡಬಾರದ್ದನ್ನು.

ಮಲ್ಲನಗೌಡ ಸಿ. ಪಾಟೀಲ, ರಂಭಾಪೂರ
*ಶೃಂಗಾರಕ್ಕೂ, ಅಶ್ಲೀಲಕ್ಕೂ ಇರುವ ವ್ಯತ್ಯಾಸವೇನು?*
ಒಂದೇ ಒಂದು ಕೊಂಬಿನ ವ್ಯತ್ಯಾಸ; ಶೃಂಗಾರ ಕಳೆ; ಅಶ್ಲೀಲ ಕೊಳೆ.

ಪಿ.ಜೆ. ರಾಘವೇಂದ್ರ, ಮೈಸೂರು
*ಫೇಸ್‌ಬುಕ್ಕಿಗೂ, ಬಿಗ್ ಬಾಸ್ ಮನೆಗೂ ಇರುವ ವ್ಯತ್ಯಾಸವೇನು ಸಾರ್?*




ಒಂದು ಒಂದೇ ಬಣ್ಣದ ಪಕ್ಷಿಗಳ ಗೂಡು, ಇನ್ನೊಂದು ವಿವಿಧ ಪ್ರಾಣಿಗಳ ಮೃಗಾಲಯ.

ಮುರಲೀಧರ ಕುಲಕರ್ಣಿ, ಬೀದರ್
*ನವೆಂಬರ್ ತಿಂಗಳಲ್ಲಿ ಮಾತ್ರ ಕನ್ನಡಿಗರಿಗೆ ಕನ್ನಡ ನೆನಪಾಗುವುದೇಕೆ?*
ಅಪ್ಪ, ಅಮ್ಮ, ನಾಡು, ನುಡಿಗಳನ್ನು ಕೇವಲ ಜನ್ಮದಿನದಂದು ನೆನೆಯುವುದು ಈಗಿನ ಫ್ಯಾಷನ್. ನವೆಂಬರ್ 1 ಕನ್ನಡದ ಬರ್ತ್‌ಡೇ.

ಟಿ. ಪ್ರಸನ್ನ, ದಾವಣಗೆರೆ
*ರೈತರು ಇರುವ ಕಡೆ ಮಳೆ ಸುರಿಸೋ ಅಂದ್ರೆ ಎಲ್ಲಾ ರಾಜಧಾನಿಗೇ ಸುರೀತೀನಿ ಅನ್ನುತ್ತಾನಲ್ಲ ಮಳೆರಾಯ...?*
ಕಾವೇರಿಯ ಪ್ರದೇಶದಲ್ಲಿ ಸುರಿದು ಕಾವೇರಿಸುವುದಕ್ಕಿಂತ ನಗರದಲ್ಲಿ ಬೀಳುವೆ, ಕೆರೆ ಕಟ್ಟಿ ಎನ್ನುತ್ತಿದ್ದಾನೆ, ದಡ್ಡರಿಗೆ ಅರ್ಥವಾಗುತ್ತಿಲ್ಲ.

ಅನು, ಹಾಸನ
*ಸರ್ಕಾರಿ ಕೆಲಸದಲ್ಲಿ ಇರಲು ಕಷ್ಟ, ಬಿಡಲು ಮನಸ್ಸಿಲ್ಲ. ಏನು ಮಾಡಲಿ ರಾಮ್?*
ಔಟ್‌ಸೋರ್ಸ್ ಮಾಡಿಬಿಡಿ. ನಿಮ್ಮ ಜಾಗದಲ್ಲಿ ಹೆಚ್ಚು ಲಂಚ ಪಡೆದು ನಿಮ್ಮ ಸಂಬಳ ನಿಮಗೆ ಕೊಡುವವರು ಸಿಗುತ್ತಾರೆ.

ಹೇಮಾವತಿ ಜೈನ್, ಹೂವಿನಹಡಗಲಿ
*ಬೆಳಿಗ್ಗೆ ಎದ್ದ ಕೂಡಲೆ ನಮಗೆ ಕಸಬುಟ್ಟಿ ಎಲ್ಲಿದೆ ಎಂಬ ಯೋಚನೆ. ನಿಮಗೇನು ಯೋಚನೆ ಸರ್?*
ನನ್ನ ಯೋಚನೆ ಹಾಗಿರಲಿ; ಪ್ರತಿದಿನ ಕಸಬರಕೆ ಪ್ರಯೋಗಕ್ಕೆ ಒಳಗಾಗುವಷ್ಟು ನಿಮ್ಮನ್ನು ಚುಡಾಯಿಸುವವರು ಯಾರು?

ಸೃಜನ್ ಜೈನ್, ಹೂವಿನಹಡಗಲಿ
*ಮೈನರ್ ರಾಮ್, ಮೇಜರ್ ರಾಮ್; ಇಬ್ಬರಲ್ಲಿ ನಿಮಗೆ ಯಾರು ಇಷ್ಟ?*
ಇಬ್ಬರೂ ಇಷ್ಟವೇ. ಮೈನರ್ ಗಣಿಯಲ್ಲಿನ ಶ್ರಮಜೀವನಕ್ಕಾಗಿ; ಮೇಜರ್ ಜೀವನದಲ್ಲಿನ ಸೈನಿಕ ಶಿಸ್ತಿಗಾಗಿ.

ಲತಾ ಪಿ. ಸಜ್ಜನ, ಶಿರಸಿ
*ಭಾರತ ಸ್ವಾತಂತ್ರ್ಯ ಕಳೆದುಕೊಂಡದ್ದು ಯಾವಾಗ?*
ಅತಿಥಿಗಳಿಗೆ ಆದರ, ಅಣ್ಣತಮ್ಮಂದಿರಲ್ಲಿ ಅನಾದರ ಅತಿಯಾದಾಗ.

ಎಂ.ಎ. ಕುಮಾರ್, ಬೆಂಗಳೂರು
*ಸೆಲ್ಫ್ ಸ್ಟಾರ್ಟ್, ಕಿಕ್ ಸ್ಟಾರ್ಟ್; ಯಾವುದು ಉತ್ತಮ?*
ಉತ್ಸಾಹದಿಂದ ಕೆಲಸವಾಗಲು ಸೆಲ್ಫ್ ಸ್ಟಾರ್ಟ್; ಸೋಮಾರಿಯಿಂದ ಕೆಲಸ ತೆಗೆಸಲು ಕಿಕ್ ಸ್ಟಾರ್ಟ್.

ಪಿ. ಗೋವಿಂದರಾಜ್, ಶಿವಮೊಗ್ಗ
*ಕವಿಗಳು ಮಳೆ ಮತ್ತು ಮಹಿಳೆಯನ್ನೇ ತುಂಬಾ ಹೊಗಳುತ್ತಾರೆ. ಏಕೆ?*
ಮಿಂಚಿನ ಆಕರ್ಷಣೆ, ತಂಪಾಗಿಸುವ ಗುಣ ಇರುವುದರಿಂದ.

## ಬಹುಮಾನಿತ ಪ್ರಶ್ನೆ

ಸಿಹಿಮೊಗೆ ರಮೇಶ್, ಮೈಸೂರು
*ಸದನದಲ್ಲಿ ತೊಡೆತಟ್ಟಿ ಅಶ್ಲೀಲ ಮಾತನಾಡುವ ನಮ್ಮ ಜನಪ್ರತಿನಿಧಿಗಳಿಗೂ, ಅಂದು ಸಭೆಯಲ್ಲಿ ತೊಡೆತಟ್ಟಿದ ಕೌರವನಿಗೂ ವ್ಯತ್ಯಾಸವೇನು?*
ಅವನು ದುರಭಿಮಾನಿ; ಇವರು ಹಣಕ್ಕೆ ವ್ಯಾಪಾರವಾಗುವ ನಿರಭಿಮಾನಿಗಳು.

ಬಿ. ಚಂದ್ರೇಗೌಡ, ಬೆಂಗಳೂರು
*ಮದುವೆ ಜೀವಾವಧಿ ಶಿಕ್ಷೆ ಎನ್ನುತ್ತಾರಲ್ಲ, ಏಕೆ?*
ಅರಿಯದವರು ಆಡುವ ಮಾತು. ವಾಸ್ತವವಾಗಿ ಅದು ಜೀವಾವಧಿ ಶಿಕ್ಷಣ.

ವೈ.ಎನ್. ಸುಂದರೇಶನ್, ಮೈಸೂರು
*ಕತ್ತಲೆ ಎಂಬ ಜಗತ್ತಿನಲ್ಲಿ ಸತ್ಯವನ್ನು ಹುಡುಕಲು ಎಂತಹ ದೀಪ ಬೇಕು ರಾಮ್?*
ನ್ಯಾಯದ ಹಣತೆಯಲ್ಲಿ ನೀತಿಯ ಎಣ್ಣೆ ಸುರಿದು ಸುಳ್ಳನ್ನು ಬತ್ತಿ ಮಾಡಿ ಸುಟ್ಟರೆ ಸತ್ಯದ ಮೇಲೆ ಬೆಳಕು.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
*ಕೆಸರಿನಲ್ಲಿ ಕಮಲ ಹುಟ್ಟುವುದು. ರಾಜಕೀಯದಲ್ಲಿ?*



ಕೆಸರು ಹುಟ್ಟುವುದು.

ಪ್ರೊಮ್ಮ, ಹೂವಿನಹಡಗಲಿ
*ಕುವೆಂಪು ಹಾಗೆ ಕಾದಂಬರಿ ಬರೆಯಬೇಕು, ರಾಮ್ ಹಾಗೆ ಉತ್ತರಿಸಬೇಕೆಂಬ ಬಯಕೆ. ಏನು ಮಾಡಲಿ ಸಾರ್?*
ಅಧ್ಯಯನದ ಮಳೆಯಿಂದ ಅರಿವಿನ ಜಲಾಶಯ ತುಂಬಲಿ; ಕಾಲುವೆಗಳು ತಾವೇ ಗೋಚರಿಸುತ್ತವೆ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಲಂಚವಿಲ್ಲದ ಠಾಣದಲ್ಲಿ ಬಾಳೆಹಣ್ಣು ತಿನ್ನು ಎಂದು ಕನಕದಾಸರಿಗೆ ಹೇಳಿದ್ದರೆ ಏನು ಮಾಡುತ್ತಿದ್ದರು ರಾಮ್?*
ಎಲ್ಲಿ ಸಿಸಿಟಿವಿ ಇದೆಯೋ ಅಲ್ಲಿ ನಿಂತು ತಿನ್ನುತ್ತಿದ್ದರು.

■ ರಾಮ್